# ಕರ್ನಾಟಕ ಲೋಕಾಯುಕ್ತ

ನಂ. ಕಂಪ್ಲೆಂಟ್/ಉಪಲೋಕ್/ಬಿಡಿ/1297/2021
ಮಂಡನಾಧಿಕಾರಿಗಳ ಶಾಖೆ, ಎಆರ್‌ಇ-18

ಬಹುಮಹಡಿಗಳ ಕಟ್ಟಡ,
ಡಾ: ಅಂಬೇಡ್ಕರ್ ವೀದಿ, ಬೆಂಗಳೂರು,
ದಿನಾಂಕ: 27/11/2021

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(3)ರ ಅನ್ವಯ ವರದಿ

ವಿಷಯ: ಶ್ರೀ ಟಿ.ಕೆ. ತಿಪ್ಪುರಾವ್ ಬಿನ್ ಲೇಟ್ ಟಿ. ಕೃಷ್ಣರಾವ್, ಗ್ರೇಡ್-1 ತಹಶೀಲ್ದಾರ್, ಪಾವಗಡ ತಾಲ್ಲೂಕು ಕಛೇರಿ, ತುಮಕೂರು ಜಿಲ್ಲೆ ಇವರು ಸರ್ಕಾರಿ/ಸಾರ್ವಜನಿಕ ನೌಕರರಾಗಿ ದುರ್ನಡತೆ ಎಸಗಿರುವ ಬಗ್ಗೆ ಇವರ ವಿರುದ್ಧದ ನಡವಳಿ ಕುರಿತು.

*****

ಭ್ರಷ್ಟಾಚಾರ ನಿಗ್ರಹ ದಳ ಕೇಂದ್ರ ವಲಯ, ಬೆಂಗಳೂರು ಪೊಲೀಸ್ ಅಧೀಕ್ಷಕರು ಇವರು ತುಮಕೂರು ಜಿಲ್ಲೆಯ ಪೊಲೀಸ್ ಠಾಣೆಯ ಆರಕ್ಷಕ ನಿರೀಕ್ಷಕರು (ಇನ್ನು ಮುಂದೆ 'ತನಿಖಾಧಿಕಾರಿ' ಎಂದು ಕರೆಯಲ್ಪಡುತ್ತಾರೆ) ತನಿಖಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳೊಂದಿಗೆ ಸಲ್ಲಿಸಿದ ವರದಿಯಲ್ಲಿ ಶ್ರೀ ಟಿ.ಕೆ. ತಿಪ್ಪುರಾವ್ ಬಿನ್ ಲೇಟ್ ಟಿ. ಕೃಷ್ಣರಾವ್, ಗ್ರೇಡ್ -1 ತಹಶೀಲ್ದಾರ್, ಪಾವಗಡ ತಾಲ್ಲೂಕು ಕಛೇರಿ, ತುಮಕೂರು ಜಿಲ್ಲೆ (ಇನ್ನು ಮುಂದೆ 'ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ಸರ್ಕಾರಿ/ಸಾರ್ವಜನಿಕ ನೌಕರರಾಗಿದ್ದು, ಶ್ರೀ ಎಸ್. ನರಸಿಂಹಯ್ಯ ತಂದೆ ಲೇ ಪೂಜಾರ್ ಸಂಜೀವಪ್ಪ, ವೀರಗೊಂದಿ, ಕನ್ನಮೇಡಿ (ಪೋ) ಕಸಬಾ ಹೋಬಳಿ, ಪಾವಗಡ ತಾಲ್ಲೂಕ್, ತುಮಕೂರು ಜಿಲ್ಲೆ (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ಇವರು ಎದುರುದಾರರನ್ನು ಭೇಟಿ ಮಾಡಿದಾಗ ದುರ್ನಡತೆ ತೋರಿಸಿರುತ್ತಾರೆ ಎಂದು ವರದಿ ಸಲ್ಲಿಸಿದ ಮೇರೆಗೆ, ದಾಖಲೆಗಳನ್ನು ಪರಿಶೀಲಿಸಿದಾಗ, ಎದುರುದಾರರು ದುರ್ನಡತೆ ತೋರಿಸಿರುತ್ತಾರೆ ಎನ್ನುವುದು ಮೇಲ್ನೋಟಕ್ಕೆ ಕಂಡುಬಂದಿದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 7(2) ರನ್ವಯ ಗೌರವಾನ್ವಿತ ಉಪಲೋಕಾಯುಕ್ತರವರು ತನಿಖೆ ಕೈಗೊಂಡಿರುತ್ತಾರೆ.

2) ದೂರಿನ ಸಂಕ್ಷಿಪ್ತ ಸಾರಾಂಶ:-

i. ದೂರುದಾರರ ಪಿತ್ರಾರ್ಜಿತ ಜಮೀನು ವೀರಲಗೊಂದಿ ಗ್ರಾಮದ ಸರ್ವೆ ನಂ. 55/5 ರಲ್ಲಿ 2 ಎಕರೆ 18 ಗುಂಟೆ ಇದ್ದು ಅದರಲ್ಲಿ ಅವರ ದೊಡ್ಡಪ್ಪ ಲೇ. ಕೆ. ಸಂಜೀವಪ್ಪನ ಮಗನಾದ ಲೇ. ಅಶ್ವತ್ಥಪ್ಪನ ಹೆಂಡತಿ ಜಯಮ್ಮನವರಿಗೆ ಪೌವತಿ ಖಾತೆ ಮಾಡುವಾಗ ಸರ್ವೆ ನಂ. 55/5 ರಲ್ಲಿ 2 ಎಕರೆ 18 ಗುಂಟೆ ಜಮೀನನ್ನು ಪೂರ್ತಿಯಾಗಿ ಅವರಿಗೆ ಖಾತೆ ಬದಲಾವಣೆ ಮಾಡಿರುತ್ತಾರೆ. ಇದರಲ್ಲಿ ದೂರುದಾರರಿಗೆ 38 ಗುಂಟೆ ಜಮೀನಿನ ಭಾಗ ಬರಬೇಕಾಗಿದ್ದು ಈ ಬಗ್ಗೆ ಅವರು ಮಧುಗಿರಿ ಉಪವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ 2006 ನೇ ಸಾಲಿನಲ್ಲಿ ಅಪೀಲು ಮಾಡಿದಾಗ ಅವರು ದಿನಾಂಕ 28/12/2016 ರಂದು ಸದರಿ ಖಾತೆಯನ್ನು ರದ್ದುಪಡಿಸಿ ದಾಖಲೆಗಳನ್ನು ಪರಿಶೀಲಿಸಿ ಕ್ರಮ ಕೈಗೊಳ್ಳುವಂತೆ ಸೂಚಿಸಿ ಪಾವಗಡ ತಹಶೀಲ್ದಾರ್‌ರವರ ನ್ಯಾಯಾಲಯಕ್ಕೆ ವರ್ಗಾವಣೆ ಮಾಡಿದಾಗ ಅಲ್ಲಿ ಪ್ರಕರಣ ವಿಚಾರಣೆಯಲ್ಲಿದ್ದಾಗ ದೂರುದಾರರು ಮತ್ತು ಅವರ ಅತ್ತಿಗೆಯಾದ ಜಯಮ್ಮರವರು ರಾಜಿ ಮಾಡಿಕೊಂಡು ಎದುರುದಾರರಿಗೆ ಒಪ್ಪಿಗೆ ಪತ್ರ ಬರೆದುಕೊಟ್ಟಿರುತ್ತಾರೆ. ಆಗ ಎದುರುದಾರರು "ನನಗೆ ಸರಿಯಾಗಿ ನೋಡಿಕೊಂಡರೆ ನಿಮ್ಮ ಪ್ರಕರಣವನ್ನು ಮುಕ್ತಾಯ ಮಾಡಿಕೊಡುತ್ತೇನೆ" ಎಂದು ದೂರುದಾರರಿಗೆ ತಿಳಿಸಿರುತ್ತಾರೆ. ಈ ಸಂಬಂಧ ಅವರು 2-3 ಬಾರಿ ಹೋಗಿ ಎದುರುದಾರರನ್ನು ಕಂಡಿದ್ದರೂ ಸಹ ಅವರ ಕೆಲಸವನ್ನು ಮಾಡಿಕೊಟ್ಟಿರುವುದಿಲ್ಲ. ನಂತರ ವಿಧಾನಸಭೆ ಚುನಾವಣೆ ಹತ್ತಿರ ಬಂದಿದ್ದರಿಂದ ಎದುರುದಾರರಿಗೆ ವರ್ಗಾವಣೆಯಾಗಿರುತ್ತದೆ. ಚುನಾವಣೆ ಮುಗಿದ ನಂತರ ಎದುರುದಾರರು ಮತ್ತೆ ಪಾವಗಡ ತಹಶೀಲ್ದಾರರಾಗಿ ವಾಪಸ್ಸು ಬಂದಾಗ ದೂರುದಾರರು ಮತ್ತು ಅತ್ತಿಗೆಯ ಮಗನಾದ ರಾಘವೇಂದ್ರರವರು ಸೇರಿ ಎದುರುದಾರರನ್ನು ಎರಡು ಸಲ ಭೆಟ್ಟಿಯಾಗಿ ತಮ್ಮ ಪ್ರಕರಣದ ಬಗ್ಗೆ ವಿಚಾರಿಸಿದಾಗ ಎದುರುದಾರರು ದೂರುದಾರರಿಗೆ 50,000/-ರೂ. ಲಂಚದ ಹಣ ಕೊಡುವಂತೆ ಬೇಡಿಕೆ ಇಟ್ಟಿರುತ್ತಾರೆ. ಆಗ ದೂರುದಾರರು "ನಮ್ಮ ಬಳಿ ಅಷ್ಟು ಹಣ ಇಲ್ಲ"ಎಂದು

ವಾಪಸ್ ಬಂದಿದ್ದರಿಂದ ಎದುರುದಾರರು ದಿನಾಂಕ 06/08/2018 ರಂದು ರಾತ್ರಿ 8-00 ಘಂಟೆ ಸಮಯದಲ್ಲಿ ದೂರುದಾರರು ಮತ್ತು ಅವರ ಅತ್ತಿಗೆ ಮಗನಾದ ರಾಘವೇಂದ್ರರವರನ್ನು ಎದುರುದಾರರು ತಮ್ಮ ಮನೆ ಹತ್ತಿರ ಕರೆಯಿಸಿಕೊಂಡು ಅವರಿಗೆ ನಿಮ್ಮ ಪ್ರಕರಣವನ್ನು ಮುಕ್ತಾಯ ಮಾಡಿಕೊಡುತ್ತೇನೆ ಅದಕ್ಕೆ "ನನಗೆ 10,000/- ರೂ. ಹಣ ಕೊಡಿ ಎಲ್ಲವನ್ನೂ ನಾನು ನೋಡಿಕೊಳ್ಳುತ್ತೇನೆ " ಎಂದು ಲಂಚದ ಹಣಕ್ಕೆ ಬೇಡಿಕೆ ಇಟ್ಟಿರುವ ಸಂಭಾಷಣೆಯನ್ನು ದೂರುದಾರರು ತಮ್ಮ ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿಕೊಂಡಿದ್ದು ಅದು ಮೆಮೋರಿ ಕಾರ್ಡನಲ್ಲಿ ಸೇವ್ ಆಗಿರುತ್ತದೆ.

ii. ದೂರುದಾರರಿಗೆ ಲಂಚದ ಹಣ ಕೊಡಲು ಇಷ್ಟವಿಲ್ಲದೇ ಇದ್ದುದರಿಂದ, ದಿನಾಂಕ 07/08/2018 ರಂದು ಸಾಯಂಕಾಲ 4-30 ಘಂಟೆಗೆ ಭ್ರಷ್ಟಾಚಾರ ನಿಗ್ರಹ ದಳ ತುಮಕೂರು ಪೊಲೀಸ್ ಠಾಣೆಗೆ ಹಾಜರಾಗಿ ತನಿಖಾಧಿಕಾರಿಯವರ ಮುಂದೆ ದೂರು ನೀಡಿದ ಪ್ರಕಾರ ಸದರಿ ಪೊಲೀಸ್ ಠಾಣೆಯಲ್ಲಿ ಮೊ. ಸಂ. 10/2018 ಪಿ.ಸಿ. ಕಾಯಿದೆ ಕಲಂ 7 ರಡಿ ಎದುರುದಾರರ ವಿರುದ್ಧ ಪ್ರಥಮ ವರ್ತಮಾನ ವರದಿ ದಾಖಲಾಗಿರುತ್ತದೆ.

iii. ನಂತರ ತನಿಖಾಧಿಕಾರಿಗಳು ಪ್ರಾಯೋಗಿಕ ಪಂಚನಾಮೆ ಮಾಡುವ ಕಾಲಕ್ಕೆ ದೂರುದಾರರಿಗೆ ಸಂಭಾಷಣೆ ರೆಕಾರ್ಡ್ ಆಗಿರುವ ಮೆಮೊರಿ ಕಾರ್ಡನ್ನು ಹಾಜರುಪಡಿಸಲು ತಿಳಿಸಿದಾಗ ಅವರು ಅದನ್ನು ಹಾಜರುಪಡಿಸಿದ್ದು ತನಿಖಾಧಿಕಾರಿಯು ಸದರಿ ಸಂಭಾಷಣೆಯನ್ನು ತಮ್ಮ ಲ್ಯಾಪ್ ಟಾಪ್‌ನಲ್ಲಿ ಹಾಕಿ ಅದರಿಂದ ಒಂದು ಡಿ.ವಿ.ಡಿ.ಯನ್ನು ಮಾಡಿ ಪಂಚರ ಸಮಕ್ಷಮ ಅಮಾನತ್‌ಪಡಿಸಿಕೊಂಡಿರುತ್ತಾರೆ.

iv. ತನಿಖಾಧಿಕಾರಿಗಳು ಜಪ್ತಿ ಪೂರ್ವದ ಪಂಚನಾಮೆಯ ಎಲ್ಲ ಔಚಿತ್ಯಪೂರ್ವ ನಡವಳಿಕೆಗಳನ್ನು ನಡೆಸಿದ ನಂತರ ದೂರುದಾರರು, ಪಂಚ ಸಾಕ್ಷಿಗಳು, ಸಿಬ್ಬಂಧಿಯವರೊಂದಿಗೆ ಹೊರಟು ಪಾವಗಡ ಟೌನ್‌ನಲ್ಲಿರುವ ತಾಲ್ಲೂಕು ಕಛೇರಿಯ ಮುಂಭಾಗ ಇರುವ ಕಲ್ಯಾಣದುರ್ಗ ರಸ್ತೆಯ ಸ್ವಲ್ಪ ದೂರದಲ್ಲಿ

ವಾಹನಗಳನ್ನು ನಿಲ್ಲಿಸಿ ದೂರುದಾರರ ಹಾಗೂ ನೆರಳು ಸಾಕ್ಷಿಯಾದ ವೆಂಕಟೇಶ್‌ರವರಿಗೆ ಪ್ರಾಯೋಗಿಕ ಪಂಚನಾಮೆ ಸಮಯದಲ್ಲಿ ನೀಡಿದ ಸೂಚನೆಗಳನ್ನು ಮತ್ತೊಮ್ಮೆ ಮರು ಜ್ಞಾಪಿಸಿ ಎದುರುದಾರರನ್ನು ಭೆಟ್ಟಿಯಾಗಲು ಕಳುಹಿಸಿ ಕೊಟ್ಟಿರುತ್ತಾರೆ. ದೂರುದಾರರು ಮತ್ತು ನೆರಳು ಸಾಕ್ಷಿದಾರರು ಕೂಡಿಕೊಂಡು ಎದುರುದಾರರು ಕಾರ್ಯ ನಿರ್ವಹಿಸುವ ಕಛೇರಿಗೆ ಹೋಗಿ ಸ್ವಲ್ಪ ಸಮಯದ ನಂತರ ಅವರಿಬ್ಬರೂ ವಾಪಸ್ ಬಂದು ಎದುರುದಾರರು ಮನೆಗೆ ಊಟಕ್ಕೆ ಹೋಗಿರುವುದಾಗಿ ಮತ್ತು ಈ ಹಿಂದೆ ತಾನು ಎದುರುದಾರರನ್ನು ಭೇಟಿಯಾದಾಗ ಎದುರುದಾರರು ತಮಗೆ "ನಾನು ಕಛೇರಿಯಲ್ಲಿ ಸಿಗದಿದ್ದರೆ ಮನೆಗೆ ಬಂದು ಭೇಟಿಯಾಗುವಂತೆ "ತಿಳಿಸಿರುತ್ತಾರೆ ಹಾಗಾಗಿ ಎದುರುದಾರರ ಮನೆಗೆ ಹೋಗಿ ಭೇಟಿ ಮಾಡೋಣ ಎಂದು ತನಿಖಾಧಿಕಾರಿಯವರಿಗೆ ತಿಳಿಸಿದಾಗ ಅವರು ಒಪ್ಪಿ ಎದುರುದಾರರನ್ನು ಭೇಟಿ ಮಾಡಲು ಅವರ ಮನೆಗೆ ಕಳುಹಿಸಿರುತ್ತಾರೆ. ದೂರುದಾರರು ಮತ್ತು ನೆರಳು ಸಾಕ್ಷಿದಾರರು ಮಾರುತಿ ಕ್ಲಿನಿಕ್ ಎದುರುಗಡೆ ಇರುವ 2ನೇ ಮನೆಯ ಮೊದಲನೇ ಮಹಡಿಯಲ್ಲಿರುವ ಎದುರುದಾರರ ಮನೆಗೆ ಹೋದಾಗ ಮನೆಯ ಮುಂದೆ ಇದ್ದ ಚೇರ್‌ನಲ್ಲಿ ಕುಳಿತುಕೊಂಡಿದ್ದವರು ದೂರುದಾರರನ್ನು ನೋಡಿ ತಮ್ಮ ಬಳಿ ಕರೆದಾಗ ಅವರು "ಸರ್ ನಮ್ಮ ಕೇಸ್ ಮುಕ್ತಾಯ ಮಾಡೋದ್ ಸರ್" ಎಂದು ಹೇಳಿದಾಗ ಎದುರುದಾರರು ಅವರ ಜೊತೆಯಲ್ಲಿದ್ದ ನೆರಳು ಸಾಕ್ಷಿಯನ್ನು ನೋಡಿ ಇವರು ಯಾರು ಎಂದು ಕೇಳಿರುತ್ತಾರೆ. ಆಗ ದೂರುದಾರರು ತನ್ನ ಮಗ ಎಂದು ಹೇಳಿರುತ್ತಾರೆ. ನಂತರ ಎದುರುದಾರರು ಸುತ್ತ ಮುತ್ತ ಯಾರೂ ಇಲ್ಲದೇ ಇರುವುದನ್ನು ಖಾತರಿಪಡಿಸಿಕೊಂಡು 10,000/- ರೂ.ಗಳನ್ನು ತಂದಿರುವಿರಾ ಎಂದು ಕೇಳಿದಾಗ ಹೌದು ಸರ್ ತಂದಿರುತ್ತೇನೆಂದು ಹೇಳಿದಾಗ ಎದುರುದಾರರು ಕೊಡು ಎಂದು ಹೇಳಿ ಅವರಿಂದ ಫಿನಾಪ್ತಲಿನ್ ಪೌಡರ್ ಲೇಪಿತ ಲಂಚದ ಹಣವನ್ನು ತಮ್ಮ ಬಲಗೈಯಿಂದ ಪಡೆದುಕೊಂಡು ಮನೆಯ ಒಳಗಡೆ ಹೋಗಿರುತ್ತಾರೆ. ನಂತರ ದೂರುದಾರರು ಮನೆಯಿಂದ ಹೊರಗಡೆ ಬಂದು

ಅವರಿಗೆ ತನಿಖಾಧಿಕಾರಿಯವರು ಪ್ರಾಯೋಗಿಕ ಪಂಚನಾಮೆಯ ಕಾಲಕ್ಕೆ ನೀಡಿದ ಸೂಚನೆಯಂತೆ ತಮ್ಮ ಕೈಗಳಿಂದ ತಲೆಯನ್ನು ವರೆಸಿಕೊಳ್ಳುವುದರ ಮೂಲಕ ನಿಗದಿತ ಸಿಗ್ನಲ್‌ನ್ನು ನೀಡಿರುತ್ತಾರೆ. ನಂತರ ತನಿಖಾಧಿಕಾರಿಗಳು ಅಲ್ಲಿಗೆ ಬಂದು ತಮ್ಮ ಪರಿಚಯ ಮಾಡಿಸಿಕೊಂಡು ಲಂಚದ ಹಣ ಸ್ವೀಕರಿಸಿದ ಎದುರುದಾರರನ್ನು ಹಿಡಿದುಕೊಂಡಿರುತ್ತಾರೆ. ತನಿಖಾಧಿಕಾರಿಗಳು ಎದುರುದಾರರ ಬಲಗೈ ಬೆರಳುಗಳನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿ ತೊಳೆಯಲಾಗಿ, ದ್ರಾವಣದ ಬಣ್ಣ ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ. ಅದೇ ರೀತಿ ಎದುರುದಾರರ ಎಡಗೈ ಬೆರಳುಗಳನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿ ತೊಳೆದಾಗ ಅದು ಅತಿ ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ. ತನಿಖಾಧಿಕಾರಿಗಳಿಗೆ, ಎದುರುದಾರರಿಗೆ ದೂರುದಾರರಿಂದ ಪಡೆದ ಲಂಚದ ಹಣವನ್ನು ಹಾಜರುಪಡಿಸುವಂತೆ ತಿಳಿಸಿದಾಗ ಎದುರುದಾರರು ಹಾಲ್‌ನ ದಕ್ಷಿಣಕ್ಕೆ ಇರುವ ರೂಮಿನಲ್ಲಿ ಅಕ್ಕಿ ಚೀಲದ ಮೇಲಿಟ್ಟಿದ್ದ ಲಂಚದ ಹಣ ರೂ. 10,000/-ವನ್ನು ತಂದು ಹಾಜರುಪಡಿಸಿದ್ದನ್ನು ತನಿಖಾಧಿಕಾರಿಗಳು ಪಂಚರ ಸಮಕ್ಷಮ ಅಮಾನತ್ತುಪಡಿಸಿಕೊಂಡಿರುತ್ತಾರೆ. ನಂತರ ಎದುರುದಾರರು ಲಂಚದ ಹಣ ಇಟ್ಟಿದ್ದ ಅಕ್ಕಿ ಚೀಲದ ಮೇಲ್ಭಾಗದ ಜಾಗವನ್ನು ಹತ್ತಿಯಿಂದ ವರೆಸಿ ಒಂದು ಬಟ್ಟಲಿನಲ್ಲಿ ಸ್ವಲ್ಪ ಭಾಗ ಸೋಡಿಯಂ ಕಾರ್ಬೋನೇಟ್ ದ್ರಾವಣವನ್ನು ಹಾಕಿ ಆ ದ್ರಾವಣದಲ್ಲಿ ಲಂಚದ ಹಣವನ್ನು ಇಟ್ಟಿದ್ದ ಅಕ್ಕಿ ಚೀಲದ ಮೇಲ್ಭಾಗವನ್ನು ವರೆಸಿದ ಹತ್ತಿಯನ್ನು ತೊಳೆದಾಗ ದ್ರಾವಣ ತಿಳಿ ಗುಲಾಬಿ ಬಣ್ಣಕ್ಕೆ ಬದಲಾವಣೆಯಾಗಿರುತ್ತದೆ. ದ್ರಾವಣಗಳನ್ನು ಹಾಗೂ ಹತ್ತಿಯನ್ನು ತನಿಖಾಧಿಕಾರಿಗಳು ಪಂಚರ ಸಮಕ್ಷಮ ಅಮಾನತ್‌ಪಡಿಸಿಕೊಂಡಿರುತ್ತಾರೆ. ನಂತರ ತನಿಖಾಧಿಕಾರಿಗಳು ದೂರುದಾರರಿಗೆ ಪ್ರಾಯೋಗಿಕ ಪಂಚನಾಮೆಯಲ್ಲಿ ನೀಡಿದ್ದ ವಾಯ್ಸ್ ರೆಕಾರ್ಡರ್ ಬಗ್ಗೆ ವಿಚಾರಿಸಿದಾಗ ದೂರುದಾರರು ಎದುರುದಾರರನ್ನು ಭೇಟಿ ಮಾಡಲು ಹೋದಾಗ ವಾಯ್ಸ್ ರೆಕಾರ್ಡರನ್ನು ಆನ್ ಮಾಡಿಕೊಳ್ಳುವುದನ್ನು ಮರೆತಿರುವುದರಿಂದ ಸಂಭಾಷಣೆಯು ರೆಕಾರ್ಡ್

ಆಗಿರುವುದಿಲ್ಲ ಎಂದು ತಿಳಿಸಿರುತ್ತಾರೆ. ತನಿಖಾಧಿಕಾರಿಗಳು ನೆರಳು ಸಾಕ್ಷಿಯನ್ನು ಘಟನೆಯ ಬಗ್ಗೆ ಕೇಳಿದಾಗ ಅವರು ತಾನು ದೂರುದಾರರೊಂದಿಗೆ ಇದ್ದು ಎದುರುದಾರರು ದೂರುದಾರರಿಂದ ಲಂಚದ ಹಣವನ್ನು ಕೇಳಿ ಪಡೆದುಕೊಂಡಿದ್ದನ್ನು ನೋಡಿ ದೂರುದಾರರು ಮನೆಯಿಂದ ಹೊರಗೆ ಬಂದು ತಮ್ಮ ಕೈಗಳಿಂದ ತಲೆಯನ್ನು ವರೆಸಿಕೊಳ್ಳುವುದರ ಮೂಲಕ ನಿಗದಿತ ಸಿಗ್ನಲ್‌ನ್ನು ನೀಡಿರುವುದಾಗಿ ತಿಳಿಸಿರುತ್ತಾರೆ. ಆ ನಂತರ ತನಿಖಾಧಿಕಾರಿಗಳು ಎದುರುದಾರರಿಗೆ ದೂರುದಾರರಿಂದ 10,000/- ರೂ.ಗಳ ಲಂಚದ ಹಣವನ್ನು ಪಡೆದ ಬಗ್ಗೆ ವಿಚಾರಿಸಿದಾಗ ಎದುರುದಾರರು ತಮ್ಮ ಸಮಜಾಯಿಷಿಯಲ್ಲಿ "ತಾನೂ ಸಹ ಕಂದಾಯ ಇಲಾಖೆ, ಚಿಕ್ಕಬಳ್ಳಾಪುರ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಪ್ರಥಮ ದರ್ಜೆ ಸಹಾಯಕನಾಗಿ ಕರ್ತವ್ಯ ನಿರ್ವಹಿಸುವಾಗ 2012 ನೇ ಇಸವಿಯಲ್ಲಿ ಸ್ವಯಂ ನಿವೃತ್ತಿ ಪಡೆದಿರುತ್ತೇನೆಂದು, ಈಗಿನ ಕಾಲದಲ್ಲಿ ಹಣ ತೆಗೆದುಕೊಳ್ಳದೇ ಇರುವವರು ವಿರಳ, ತೆಗೆದುಕೊಳ್ಳಿರೆಂದು ಬಲವಂತವಾಗಿ ದಿ: 08/08/2018 ರಂದು ನಾನು ಊಟಕ್ಕೆ ಬಂದಾಗ ನನ್ನನ್ನು ಮನೆಯಿಂದ ಹೊರಗೆ ಕರೆದು ನನ್ನ ಕೈಯಲ್ಲಿ ಹಣವನ್ನು ಇಟ್ಟರು. ಕೈ ಮಡಿಚಿಕೊಳ್ಳುವವರೆಗೂ ಬಿಡದೇ ಕೈ ಕುಲುಕಿರುತ್ತಾರೆ. ನಾನು ಯಾವುದೇ ಹಣದ ಬೇಡಿಕೆ ಇಡದಿದ್ದರೂ ಬಲವಂತವಾಗಿ ಒತ್ತಡದಲ್ಲಿ ಇಟ್ಟು ಆಮಿಷಕ್ಕೆ ಒಳಗಾಗಿಸಿರುತ್ತಾರೆ ಎಂದು ಬರೆದುಕೊಟ್ಟ ಸಮಜಾಯಿಷಿಯ ಬಗ್ಗೆ ತನಿಖಾಧಿಕಾರಿಗಳು ನೆರಳು ಸಾಕ್ಷಿ ಹಾಗೂ ದೂರುದಾರರನ್ನು ಕೇಳಿದಾಗ ಅವರಿಬ್ಬರೂ ಎದುರುದಾರರು ನೀಡಿರುವ ಲಿಖಿತ ವಿವರಣೆ ತಪ್ಪಾಗಿರುವುದಾಗಿ ತಿಳಿಸಿ ಎದುರುದಾರರು ಈ ದಿನ ಲಂಚದ ಹಣವನ್ನು ಕೇಳಿ ಪಡೆದಿರುತ್ತಾರೆಂದು ತಿಳಿಸಿರುತ್ತಾರೆ. ಹಾಗಾಗಿ ಎದುರುದಾರರು ನೀಡಿದ ಸಮಜಾಯಿಷಿ ಒಪ್ಪಲು ಬರಲಾರದು.

V. ಎದುರುದಾರರು ತಮ್ಮ ಸಮಜಾಯಿಸಿಯನ್ನು ದಿನಾಂಕ 27/08/2021 ರಂದು ಸಲ್ಲಿಸಿರುತ್ತಾರೆ. ಸದರಿ ಸಮಜಾಯಿಸಿಯನ್ನು ಪರಿಶೀಲಿಸಲಾಗಿ ಎದುರುದಾರರು ತಾನು 31/03/2020 ರಂದು ಸೇವೆಯಿಂದ ನಿವೃತ್ತಿ

ಹೊಂದಿರುವುದಾಗಿ ತಿಳಿಸಿ ಆಪಾದನೆಗಳನ್ನು ನಿರಾಕರಿಸಿರುವುದರ ಹೊರತಾಗಿ ಆಪಾದನೆಗಳನ್ನು ಅಲ್ಲಗೆಳೆಯಲು ಯಾವುದೇ ಪೂರಕ ದಾಖಲಾತಿಗಳನ್ನು ಸಲ್ಲಿಸಿರುವುದಿಲ್ಲ. ಆದ್ದರಿಂದ ಅವರು ನೀಡಿರುವ ಸಮಜಾಯಿಸಿ ಅಂಶಗಳ ಮೇರೆಗೆ ಪ್ರಕರಣವನ್ನು ಮುಕ್ತಾಯಗೊಳಿಸಲು ಸೂಕ್ತ ಕಾರಣಗಳು ಕಂಡುಬರುವುದಿಲ್ಲ.

3) ಸಾಕ್ಷಿದಾರರ ಹೇಳಿಕೆಗಳು, ದೂರು ಅರ್ಜಿ, ತನಿಖಾಧಿಕಾರಿ ಸಂಗ್ರಹಿಸಿದ ದಾಖಲೆ, ಧ್ವನಿ ವಿಶ್ಲೇಷಣಾ ವರದಿ, ರಾಸಾಯನಿಕ ತಜ್ಞರ ಪರೀಕ್ಷಾ ವರದಿ ಮತ್ತು ತನಿಖಾಧಿಕಾರಿಗಳು ಸಂಗ್ರಹಿಸಿದ ಮುದ್ದೇ ಮಾಲುಗಳಲ್ಲಿ ಪಿನಾಪ್ತಲಿನ್ ಅಂಶ ಇರುವುದು/ಇವುಗಳನ್ನು ಪರಿಶೀಲಿಸಿದಾಗ ಎದುರುದಾರರು ದೂರುದಾರರವರಿಂದ ತುಮಕೂರು ಜಿಲ್ಲೆ ಪಾವಗಡ ತಾಲ್ಲೂಕು ವೀರಲಗೊಂದಿ ಗ್ರಾಮದ ಸರ್ವೆ ನಂ. 55/5 ರ ಬಾಬ್ತು ಪಾವಗಡ ತಾಲ್ಲೂಕು ಕಛೇರಿಯ ನ್ಯಾಯಾಲಯದ ಆರ್.ಆರ್.ಟಿ.ಡಿ. 96/2016–17 ರಲ್ಲಿ ಪ್ರಕರಣ ಮುಕ್ತಾಯ ಮಾಡಲು ಪಾವಗಡ ತಾಲ್ಲೂಕು ಕಛೇರಿಯ ತಹಸೀಲ್ದಾರ್‌ರಾದ ಎದುರುದಾರರು ದೂರುದಾರರಿಂದ 10,000/– ರೂ.ಗಳ ಲಂಚದ ಹಣಕ್ಕೆ ಬೇಡಿಕೆ ಇಟ್ಟು ದಿ: 08/08/2018 ರಂದು ಮಧ್ಯಾಹ್ನ 2–00 ಘಂಟೆ ಸಮಯದಲ್ಲಿ ತಾವು ವಾಸವಿದ್ದ ಬಾಡಿಗೆ ಮನೆಯಲ್ಲಿ ದೂರುದಾರರಿಂದ ನೆರಳು ಸಾಕ್ಷಿರವರ ಸಮಕ್ಷಮದಲ್ಲಿ 10,000/– ರೂ. ಲಂಚದ ಹಣವನ್ನು ಕೇಳಿ ಪಡೆದುಕೊಂಡು ತಮ್ಮ ಕರ್ತವ್ಯದಲ್ಲಿ ನೀತಿ ನಿಷ್ಠೆಯನ್ನು ಪಾಲಿಸದೇ ಕರ್ತವ್ಯದಲ್ಲಿ ಶ್ರದ್ದೇ ಹೊಂದಿರದೆ ಸರ್ಕಾರಿ ನೌಕರನಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು, ಭ್ರಷ್ಟಾಚಾರವೆಸಗಿ, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966ರ (ಪ್ರಸ್ತುತ ಕರ್ನಾಟಕ ನಾಗರಿಕ ಸೇವಾ(ನಡತೆ) ನಿಯಮಗಳು 2021) ರ ನಿಯಮ 3 (1) (i) ರಿಂದ (iii)ನ್ನು ಉಲ್ಲಂಘಿಸಿ ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

4) ಈ ಮೇಲ್ಕಂಡ ಅಂಶಗಳಿಂದಾಗಿ ಎದುರುದಾರರಾದ ಶ್ರೀ ಟಿ.ಕೆ. ತಿಪ್ಪುರಾವ್ ಬಿನ್ ಲೇಟ್ ಟಿ. ಕೃಷ್ಣರಾವ್, ಗ್ರೇಡ್ –1 ತಹಶೀಲ್ದಾರ್, ಪಾವಗಡ ತಾಲ್ಲೂಕು ಕಛೇರಿ, ತುಮಕೂರು ಜಿಲ್ಲೆ ಇವರ ವಿರುದ್ಧ ಶಿಸ್ತು ನಡವಳಿಕೆ ಹೂಡಲು ಮತ್ತು ಇಲಾಖಾ

ವಿಚಾರಣೆಯನ್ನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957 ರ ನಿಯಮ 14–ಎ ಸಹವಾಚಕ 214 (2) (ಬಿ) ರ ಅಡಿಯಲ್ಲಿ ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12 (3) ರನ್ವಯ ಪ್ರದತ್ತವಾದ ಅಧಿಕಾರದಡಿ, ಸಕ್ಷಮ ಪ್ರಾಧಿಕಾರಕ್ಕೆ ಈ ಮೂಲಕ ಶಿಫಾರಸ್ಸು ಮಾಡಲಾಗಿದೆ.

5) ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12 (4) ರ ಪ್ರಕಾರ, ಶಿಸ್ತು ಪ್ರಾಧಿಕಾರವು ಈ ವರದಿಯನ್ವಯ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿರುವ ಕ್ರಮದ ಈ ವರದಿ ತಲುಪಿದ ದಿನಾಂಕದಿಂದ ಮೂರು ತಿಂಗಳೊಳಗಾಗಿ ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

2/12/21

(ನ್ಯಾಯಮೂರ್ತಿ ಬಿ.ಎಸ್. ಪಾಟೀಲ್)
ಉಪಲೋಕಾಯುಕ್ತರು
ಕರ್ನಾಟಕ ರಾಜ್ಯ, ಬೆಂಗಳೂರು.